ಹೀಗೆ ಕಾಲ, ಮಾಸ, ರುತು ಚಕ್ರಗಳು ಸಕಾಲದಲ್ಲಿ ಸುತ್ತುತ್ತಿರಲು ಕಿರಿಯ ರಾಣಿ ಮತ್ತು ಸೇನಾಪತಿಯ ಪ್ರಣಯವು ಗುಪ್ತಗಾಮಿನಿಯಾಗಿಯೂ ರಭಸದಿಂದಲೇ ಹರಿಯುತ್ತಿತ್ತು. ಪ್ರೇಮವೇ ಕಿರಿಯ ರಾಣಿಯನ್ನು ಮತ್ತೆ ಜೀವನ್ಮುಖಿಯನಾಗಿಸಿದ್ದು ಸೂರ್ಯನಷ್ಟೆ ಸತ್ಯವಾದರೂ ಸೇನಾಪತಿಗೆ ಅದೇ ಪ್ರೇಮವು ಜೀವನ್ಮರಣದ ಪ್ರಶ್ನೆಯಾಗಿತ್ತು. ಕತ್ತಿ ಅಲುಗಿನ ಮೇಲಿನ ನಡಿಗೆಯಾಗಿರುವ ಇದು ಸ್ವಲ್ಪ ಆಚೀಚೆಯಾದರೂ ಕುತ್ತಿಗೆ ಕತ್ತರಿಸುತ್ತದೆ ಎಂಬುದು ಅವನಿಗೆ ಗೊತ್ತಿತ್ತು. ಬೆಂಕಿಯಂತೆ ಪ್ರೇಮವನ್ನು ಅಡಗಿಸಿಡಲು ಅಸಾಧ್ಯ ಎನ್ನುವುದನ್ನು ಅವನು ತಿಳಿಯಬಲ್ಲವನಾಗಿದ್ದ. ಒಂದು ವೇಳೆ ಇದು ಬಹಿರಂಗಗೊಂಡರೆ ಮರಣ ಖಚಿತವಾಗಿತ್ತು. ಸಾವಿಗೆ ಹೆದರುವವನಲ್ಲವಾದರೂ ರಾಜದ್ರೋಹದ ಅಪವಾದದಿಂದ ಇತಿಹಾಸದಲ್ಲಿ ಕಪ್ಪು ಕಲೆಯಾಗುಳಿಯುವುದು ಅವನು ಎಂದೂ ಇಷ್ಟಪಡಲಾರ. ಮಹಾಸೇನಾಧಿಪತಿಯಾಗಿದ್ದ ಅವನ ತಂದೆ ಸಮರದಲ್ಲಿ ಹುತಾತ್ಮನಾದ ನಂತರ ಮಹಾರಾಜನು ಇವನನ್ನು ಚಿಕ್ಕವನಿರುವಾಗಲೇ ಸೇನೆಗೆ ನಿಯುಕ್ತಗೊಳಿಸಿದ್ದನು. ತನ್ನ ಶೌರ್ಯ ಮತ್ತು ವಿಧೇಯತೆಯಿಂದಾಗಿ ಅಲ್ಪ ಕಾಲಾವಧಿಯಲ್ಲೇ ಸೇನಾಧಿಪತಿ ಸ್ಥಾನ ತಲುಪಿದ್ದನು. ತಂದೆಯಂತೆ ಶೂರನೆಂದು ಪ್ರಸಿದ್ಧಿ ಪಡೆದಿದ್ದ ಅವನು ಯಃಕಶ್ಚಿತ್ ಪ್ರೇಮದ ವಿಷಯದಲ್ಲಿ ಭಯದಿಂದ ನಲುಗುವಂತಾಯಿತು. ಅವನ ಸೊಂಟದಲ್ಲಿ ಮಿರುಗುವ ಯಾವ ಖಡ್ಗವೂ ಅವನ ಭಯವನ್ನು ನಿವಾರಿಸದಾಯಿತು. ಉಕ್ಕಿನ ಎದೆಗವಚ ಬಾಹುಗವಚ ಶಿರಸ್ತ್ರಾಣಗಳನೆಲ್ಲ ಧರಿಸಿ ಯುದ್ಧ ಸನ್ನದ್ಧ ಸ್ಥಿತಿಯಲ್ಲಿದ್ದರೂ ಪ್ರೇಮವು ಅವನನ್ನು ನಿರಾಯುಧನನ್ನಾಗಿಸಿತು. ತನ್ನ ಮನದ ತೊಳಲಾಟವನ್ನು ನಿವೇದಿಸಿಕೊಳ್ಳಬೇಕೆಂದರೆ ಕಿರಿಯ ರಾಣಿ ಸನಿಹವಿಲ್ಲ. ವ್ಯಾಘ್ರ ದಾಳಿಯ ಕಾರಣಕ್ಕೆ ಮಹಾರಾಜನು ಮತ್ತೆ ಕಿರಿಯ ರಾಣಿಯನ್ನು ವನವಿಹಾರಕ್ಕೆ ಕಳುಹಿಸಲು ಅನುಮತಿ ನೀಡಲಿಲ್ಲ. ಹೀಗಾಗಿ ಸೇನಾಪತಿ ಮತ್ತು ಕಿರಿಯ ರಾಣಿಯರಿಗೆ ಏಕಾಂತದ ಭೇಟಿಯ ಸಾಧ್ಯತೆ ಕೂಡ ಇಲ್ಲವಾಯಿತು. ಆದರೆ ಕಿರಿಯ ರಾಣಿ ಆಪ್ತಳಾದ ಮಂಗಳಮುಖಿಯ ಮೂಲಕ ಕಳುಹಿಸುವ ಸುಂದರ ಸಂದೇಶಗಳಿಂದ ಆಗಾಗ ಸೇನಾಪತಿಯ ಮನಸ್ಸನ್ನು ಬೆಚ್ಚಗೆ ಮಾಡುವಳು. ಸೇನಾಪತಿಯ ಭೂಮಿಯಗಲ ಎದೆ ತುಂಬಾ ಚಿತ್ತಾರ ಬಿಡಿಸುವಳು. ಪ್ರೇಮದ ಭಾವದಲ್ಲೂ ವಿರಹದ ಸಣ್ಣ ಉರಿ ಸಣ್ಣಗೆ ಸೇನಾಪತಿಯ ಮನಸ್ಸನ್ನು ಸುಡುತ್ತಿತ್ತು. ಯಾಕೋ ಗೆಳತಿ ಮಾಲವಿಕೆಯ ನೆನಪು ತೀವ್ರವಾಗತೊಡಗಿತು. ತನ್ನ ಬಾಲ್ಯದ ಗೆಳತಿಯಾಗಿದ್ದ ಮಾಲವಿಕಾ ತನ್ನನ್ನು ಪ್ರೇಮಿಸುತ್ತಿರುವೆನೆಂದೂ ವಿವಾಹವಾಗಬೇಕೆಂದೂ ಪರಿಪರಿಯಾಗಿ ಕೇಳಿದ್ದಳು. ಅದನ್ನು ಸೇನಾಪತಿ ಧಿಕ್ಕರಿಸಿದ್ದು ಎಲ್ಲರಿಗೂ ಗೊತ್ತಿತ್ತು. ಶೂರನೂ ಧೀರನೂ ಆಗಿ ರಾಜ್ಯಕ್ಕೂ ರಾಜನಿಗೂ ಕೀರ್ತಿ ತರಬೇಕೆಂದು ಕನಸು ಕಾಣುತ್ತಿದ್ದ ಸೇನಾಪತಿ ಆ ಸಾಧನೆಗಾಗಿ ಬ್ರಹ್ಮಚಾರಿಯಾಗಿಯೇ ಉಳಿಯುವೆನೆಂದು ಶಪಥಗೈದಿದ್ದೂ ಇಡೀ ರಾಜ್ಯಕ್ಕೇ ತಿಳಿದ ವಿಷಯವಾಗಿತ್ತು. ಅಂತೆಯೇ ಮಾಲವಿಕಾಳ ಪ್ರೇಮ ಪ್ರಸ್ತಾಪವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದನು. ಆದರೆ ಮಾಲವಿಕಾಳ ಪ್ರೇಮ ನಿವೇದನೆಯ ಸಂದರ್ಭದಲ್ಲಿ ತಾನು ಒರಟಾಗಿ ನಡೆದುಕೊಂಡೆ ಎಂಬುದು ಪ್ರೇಮದ ಅರಿವಿನಲ್ಲಿ ಈಗ ಅವನನ್ನು ತೀವ್ರವಾಗಿ ಕಾಡತೊಡಗಿತು. ನೈಜ ಪ್ರೀತಿಯನ್ನು ಅರಿಯದೇ ತನ್ನನ್ನು ಜೀವದಂತೆ ಹಚ್ಚಿಕೊಂಡಿದ್ದ ಅವಳ ಭಾವನೆಗಳನ್ನು ಹಗುರವಾಗಿ ಕಂಡೆನಲ್ಲ ಎಂದು ನೊಂದುಕೊಂಡನು. ಮನಸಿಲ್ಲದ ಮನಸಿನಿಂದ ಮಾಲವಿಕಾ ಪಕ್ಕದ ಊರಿನ ಸಿರಿವಂತನಿಗೆ ಮದುವೆಯಾಗಿ ಹೊರಟುಹೋಗಿ ವರ್ಷಗಳೇ ಆಗಿವೆ. ಯಾಕೋ ಅವಳನ್ನು ಕಾಣಬೇಕು, ಈಗಷ್ಟೇ ಕಲಿತಿರುವ ಪ್ರೇಮದ ಮಾತುಗಳಿಂದ ಘಾಸಿಗೊಳಿಸಿದ ಅವಳೆದೆಯ ನವಿರು